ಮೂಲ ದಾವಾ ಸಂಖ್ಯೆ. 248/2016 ಪಿ ಡಬ್ಲ್ಯೂ 2

(ದಿನಾಂಕ 13-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಪಿ ಕೆ ವಕೀಲರಿಂದಃ-

ನಾನು ವೃತ್ತಿಯಿಂದ ಶಿಕ್ಷಕನಾಗಿದ್ದೇನೆ. ದಾವಾಸ್ತಿ ನಂ.105 ಇರುತ್ತದೆ. ಅದನ್ನು ನಾನು ನನ್ನ ಹೆಂಡತಿಯ ಹೆಸರಿಗೆ ಖರೀದಿಸಿರುತ್ತೇನೆಂದರೆ ಸರಿ. ನಾನು ಸದರಿ ಆಸ್ತಿಯನ್ನು ಹುಲುಗಪ್ಪ ಇವರಿಂದ ಖರೀದಿಸಿರುತ್ತೇನೆ. ಹುಲುಗಪ್ಪ ಇವರಿಗೆ ಸದರಿ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸದರಿ ಹುಲುಗಪ್ಪ ಇವರು ಸನ್ 1997-98 ರಲ್ಲಿ ಹಂಪಸಾಗರ ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಸದರಿಯವರು ತನ್ನ ಅಧಿಕಾರಾವಧಿಯಲ್ಲಿ ತನ್ನ ಹೆಂಡತಿಯಾದ ಹುಲಿಗೆಮ್ಮರವರ ಹೆಸರಿಗೆ ಒಂದು ಪಂಚಾಯ್ತಿ ಆಸ್ತಿಯನ್ನು ಪಂಚಾಯ್ತಿ ದಾಖಲೆಗಳಲ್ಲಿ ಬರೆಯಿಸಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದ ಎಂದರೆ ಸಾಕ್ಷಿಯು ಆಸ್ತಿ ಅವರ ಹೆಂಡತಿ ಹೆಸರಿನಲ್ಲಿತ್ತು ಆದರೆ ಅದು ಯಾವ ರೀತಿ ದಾಖಲಾಗಿತ್ತು ಎಂದು ನನಗೆ ಗೊತ್ತಿಲ್ಲವೆನ್ನುತ್ತಾರೆ. ಸದರಿ ಆಸ್ತಿಯ ಕುರಿತು ನಾನು ಹುಲುಗೆಮ್ಮ ಇವರ ಹೆಸರಿಗೆ ಇರುವ ನಮೂನೆ-10 ನ್ನು ನೋಡಿದ್ದೇನೆ. ಮೂಲ ದಾಖಲೆಯ ಬಗ್ಗೆ ನೀವು ಹುಲುಗಪ್ಪ ಇವರಿಗೆ ಪ್ರಶ್ನಿಸಿದ್ರಾ ಎಂದರೆ ಸಾಕ್ಷಿಯು ಅವರ ಹೆಸರಿಗೆ ಪತ್ರ ನೊಂದಣಿಯಾಗಿತ್ತು ಅದರ ಆಧಾರದ ಮೇಲೆ ನಾವು ಖರೀದಿ ಮಾಡಿದ್ದೇವೆನ್ನುತ್ತಾರೆ. ನಾನು ಖರೀದಿ ಮಾಡಿರುತ್ತೇನಂತಾ ಹೇಳುವ ಪ್ಲಾಟ್ ಇರುವುದಿಲ್ಲವೆಂದರೆ ಸರಿಯಲ್ಲ.

ಹಂಪಸಾಗರ-2 ಗ್ರಾಮ ಟಿ ಬಿ ಡ್ಯಾಂ ನಿರ್ಮಾಣವಾದಾಗ ಸ್ಥಳಾಂತರವಾದ ಗ್ರಾಮ ಎಂದರೆ ಸರಿ. ದಿಃ04-12-1956 ರಂದು ಸರ್ಕಾರದವರು ಅಲ್ಲಿ ನಿವೇಶನಗಳನ್ನು ನಿರ್ಮಾಣ ಮಾಡಿ ಫಲಾನುಭವಿಗಳಿಗೆ ಪಟ್ಟಾ ನೀಡಿರುತ್ತಾರೆಂದರೆ ಸರಿ. ಹುಂಡೇಕಾರ್ ಕರಿಬಸಮ್ಮ ಇವರಿಗೆ ಸರ್ಕಾರದವರು ಪ್ಲಾಟ್ ನಂ.29 ನ್ನು ಹಂಚಿಕೆ ಮಾಡಿರುತ್ತಾರೆಂದರೆ ಸಾಕ್ಷಿಯು ನಮಗೆ ಅಕ್ಕಪಕ್ಕದವರು ಹುಂಡೇಕಾರ್ ಕರಿಬಸಮ್ಮ ಇವರಿಗೆ ಯಾವುದೇ ಪ್ಲಾಟ್ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಹುಂಡೇಕಾರ್ ಕರಿಬಸಮ್ಮ ಇವರ ಹೆಸರಿಗೆ ಪಂಚಾಯ್ತಿಯಲ್ಲಿ ದಾಖಲೆಗಳಿದ್ದು ಆ ಬಗ್ಗೆ ನಾನು ವಿಚಾರಿಸಿರುವುದಿಲ್ಲವೆಂದರೆ ಸರಿಯಲ್ಲ. ಪ್ಲಾಟ್ ನಂ.29 ವಿಸ್ತೀರ್ಣ 45 )( 70 ಅಡಿ ನೇದ್ದನ್ನು ಹುಂಡೇಕಾರ್ ಕರಿಬಸಮ್ಮ ಇವರಿಂದ ಚಂದ್ರಮ್ಮ ಇವರು ಖರೀದಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಅರ್ಧ ಭಾಗವನ್ನು ರೆಡ್ಡಿನಾಯ್ಕ ಇವರಿಗೆ ಮತ್ತು ಇನ್ನರ್ಧ ಭಾಗವನ್ನು ದೇವಿಬಾಯಿ ಇವರಿಗೆ ಚಂದ್ರಮ್ಮ ಇವರು ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ರೆಡ್ಡಿನಾಯ್ಕ ಮತ್ತು ದೇವಿಬಾಯಿ ಇವರು ಸದರಿ ಆಸ್ತಿಗಳ ಕುರಿತು ಸರ್ವೆ

ಮೂಲ ದಾವಾ ಸಂಖ್ಯೆ. 248/2016 ಪಿ ಡಬ್ಲ್ಯೂ 2

ಇಲಾಖೆಯಿಂದ ಅಳತೆ ಮಾಡಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅಲ್ಲಿಂದ ಇಲ್ಲಿಯವರೆಗೂ ತಾವು ಖರೀದಿಸಿದ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದು ತೆರಿಗೆ ಸಹಾ ಅವರೇ ಪಾವತಿಸುತ್ತಾ ಬಂದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ಹೇಳುವ ಹಾಗೆ ನಾನು ಖರೀದಿಸಿದ ಆಸ್ತಿಯ ಪ್ಲಾಟು ಇರುವುದಿಲ್ಲ ಪತ್ರವ್ಯವಹಾರದಲ್ಲಿ ಮಾತ್ರ ಆಸ್ತಿ ದಾಖಲಿದ್ದು ಸದರಿ ಆಸ್ತಿಯು ನೈಜವಾಗಿ ಅಸ್ತಿತ್ವದಲ್ಲಿರುವುದಿಲ್ಲವೆಂದರೆ ಸರಿಯಲ್ಲ. ಸದರಿ ಪ್ಲಾಟು ಇಲ್ಲವೆಂದು ಗೊತ್ತಿದ್ದರೂ ಸಹಾ ವಾದಿಗೆ ಸದರಿ ಪ್ಲಾಟನ್ನು ಮಾರಾಟ ಮಾಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ